**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚಿಕ್ಕೋಡಿ**

CC No.:- 1884/2018

C.W.:-4

P.W.:-3

| | |
|---|---|
| ಸಾಕ್ಷಿದಾರನ ಹೆಸರು | ಪೀರೋಜ ಮತ್ತೆಬಾಯಿ |
| ತಂದೆಯ ಹೆಸರು | ಬಂಡು |
| ವಯಸ್ಸು | 36 ವರ್ಷ |
| ಕೆಲಸ | ಕೂಲಿ ಕೆಲಸ |
| ವಾಸ | ಯಡ್ಡೂರ |

ಸಾಕ್ಷಿಗೆ ಈ ದಿನ ದಿಃ 14-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾ.ಸಾ. 1 ನನ್ನ ಹೆಂಡತಿ ಆಗಬೇಕು. ಚಾಸಾ 2 ಮತ್ತು 3 ನನಗೆ ಪರಿಚಯ ಇರುತ್ತದೆ. ಚಾಸಾ 5 ನನ್ನ ತಂದೆ ಆಗಬೇಕು. ಚಾಸಾ 6 ನನ್ನ ತಾಯಿ ಆಗಬೇಕು. ಚಾಸಾ 7 ನನ್ನ ಮಾಮಾ ಆಗಬೇಕು. ಆರೋಪಿತರ ಪರಿಚಯ ಇರುತ್ತದೆ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿರುವುದಿಲ್ಲ ಹಾಗೂ ಯಾವುದೇ ರೀತಿ ಹೊಡಿ ಬಡಿ ಮಾಡಿರುವುದಿಲ್ಲ. ಮಾನಭಂಗ ಮಾಡಿಲ್ಲ ಹಾಗೂ ಜೀವ ಬೇದರಿಕೆ ಹಾಕಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ  ಸಸಅ ರವರಿಂದಃ**

ದಿಃ 06-07-2018 ರಂದು ಮಧ್ಯಾಹ್ನ 12 ಗಂಟೆಗೆ ಸುಮಾರಿಗೆ ನಾನು ನಮ್ಮ ಜಮೀನದಲ್ಲಿ ಕೆಲಸ ಮಾಡುತ್ತಿದ್ದಾಗ 1ನೇ ಆರೋಪಿತರು ಚಾಸಾ 1 ರವರ ಮನೆಯ ಮುಂದೆ ಕಸ ಒಗೆದು ಚಾಸಾ 1 ರವರು ಇಲ್ಲಿ ಯಾಕೆ ಕಸ ಒಗೆಯುತ್ತಿದ್ದಿರಿ ಎಂದು ಕೇಳಿದಾಗ 1 ನೇ ಆರೋಪಿಯು ಚಾಸಾ 1 ರವರಿಗೆ  ಅವಾಚ್ಯ ಶಬ್ದಗಳಿಂದ ಬೈದು ನಾನು ಹಾಗೂ ಚಾಸಾ 5 ರಿಂದ 6,7 ಹಾಗೂ ನಾನು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿತರು ಚಾಸಾ 1 ರವರಿಗೆ ಏ ಬೋಸಡಿ ನಿಂದ ಬಾಳ ಆಗೇತಿ ಎಂದು ಹೇಳಿ ಗಟ್ಟಿಯಾಗಿ ಹಿಡಿದು ಕೈಯಿಂದ ಹೊಡಿ ಬಡಿ ಮಾಡಿ 2 ನೇ ಆರೋಪಿಯು ಚಾಸಾ 1 ರವರಿಗೆ ಜಗ್ಗಾಡಿ ಮಾನಬಂಗ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ನಾನು ಹಾಗೂ ಚಾಸಾ 5 ರಿಂದ 6,7 ರವರು ಸದರಿ ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆ ವೇಳೆ ಆರೋಪಿತರು ಚಾಸಾ 1 ರವರಿಗೆ ಜೀವದ ಧಮಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರಿಗೆ ಆಸ್ಪತ್ರೆಗೆ ದಾಖಲಿಸಿ ಉಪಚಾರ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಚಾಸಾ 1 ರವರು ಪೊಲೀಸರಿಗೆ ಫಿರ್ಯಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ 1 ರವರಿಗೆ ಅವಾಚ್ಯವಾಗಿ ಬಯ್ದು ಹೊಡೆ ಬಡಿ ಮಾಡಿ ಮಾನ ಭಂಗ ಮಾಡಲು ಪ್ರಯತ್ನಿಸಿದರು ಹಾಗೂ ಜೀವ ಬೇದರಿಕೆ ಹಾಕಿರುತ್ತಾರೆ ಎಂದರೆ ಸರಿ ಅಲ್ಲ.

ದಿಃ 07-07-2018 ರಂದು ಪೋಲಿಸರಿಗೆ ನಿನ್ನೆ ………… 06-07-2018 ರಂದು ಫಿರ್ಯಾದಿ ಕೊಟ್ಟಿದ್ದು ಗೊತ್ತಾಗಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆ ಭಾಗವನ್ನು ನಿ.ಪಿ 3 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ನನಗೆ ಮಾಹಿತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ತರ, ಶ್ರೀ ಎಂ ಎಸ್ ಎಲ್ ವಕೀಲರಿಂದಃ**

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ